**ಓ.ಎಸ್ಃ 68/2018** **ಪಿಡಬ್ಲೂ–1 ಕಮಲಾಕ್ಷಿ @ ಕಸ್ತೂರಿ**

ದಿನಾಂಕಃ 23.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ಶ್ರೀ ಎಂ.ಎಸ್.ಜಿ. ವಕೀಲರಿಂದಃ

ನನ್ನ ಮಾವ ಲಿಂಗರಾಜೇಗೌಡರ ತಂದೆಯ ಹೆಸರು ರಾಜೇಗೌಡ. ರಾಜೇಗೌಡರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ನನ್ನ ಮಾವ ಲಿಂಗರಾಜೇಗೌಡರ ಜೊತೆ ಹುಟ್ಟಿದ ಅಕ್ಕಂದಿರ ಹೆಸರು ರಾಜಮ್ಮ, ನಾಗರತ್ನಮ್ಮ ಮತ್ತು ಇನ್ನು ಇಬ್ಬರು ಇರುತ್ತಾರೆ ಅವರ ಹೆಸರು ನನಗೆ ಗೊತ್ತಿಲ್ಲ. ನನ್ನ ಮಾವ ಲಿಂಗರಾಜೇಗೌಡರ ತಮ್ಮ ಇದ್ದು ಅವರು ಮೃತಪಟ್ಟಿರುತ್ತಾರೆ. ಅವರ ಹೆಸರು ನನಗೆ ಗೊತ್ತಿಲ್ಲ. ನನ್ನ ಮಾವ ಲಿಂಗರಾಜೇಗೌಡರ ಜೊತೆ ಹುಟ್ಟಿದ ಅಕ್ಕಂದಿರು ಮತ್ತು ತಮ್ಮನನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ಮಾವ ಲಿಂಗರಾಜೇಗೌಡರು, ಅವರ ಅಕ್ಕಂದಿರು ಹಾಗೂ ತಮ್ಮನ ನಡುವೆ ಕುಟುಂಬದ ಆಸ್ತಿಗಳ ಸಂಬಂಧ ವಿಭಾಗ ಆದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮಾವ ಲಿಂಗರಾಜೇಗೌಡರ ತಂದೆಗೆ ಎಷ್ಟು ಆಸ್ತಿ ಇದೆ ಎಂದು ನನಗೆ ಗೊತ್ತು. ನನ್ನ ಮಾವ ಲಿಂಗರಾಜೇಗೌಡರ ತಂದೆಗೆ ಸೇರಿದ ಆಸ್ತಿಗಳನ್ನು ವಾದ ಪತ್ರದಲ್ಲಿ ನಮೂದಿಸಿರುತ್ತೇನೆ. ಸಾಕ್ಷಿ ಸ್ವತಃ ನನ್ನ ಮಾವ ಲಿಂಗರಾಜೇಗೌಡರ ತಂದೆಗೆ ಒಂದು ಮನೆ ಇದ್ದು ಅದರ ಸಂಖ್ಯೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು index of land, mutation register and records of rights ಅನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ದಾಖಲೆಗಳನ್ನು ಪಡೆದುಕೊಳ್ಳಲು ನನಗೆ ತೊಂದರೆ ಇಲ್ಲ. ಸಾಕ್ಷಿ ಸ್ವತಃ ಸದರಿ ದಾಖಲಾತಿಗಳನ್ನು ಅಗತ್ಯವಿದ್ದಲ್ಲಿ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

ನನ್ನ ಮಾವ ಲಿಂಗರಾಜೇಗೌಡರವರ ತಂದೆ ರಾಜೇಗೌಡರ ಮತ್ತು ರಾಜೇಗೌಡರ ತಂದೆ ಕುಟುಂಬದ ವಂಶವೃಕ್ಷವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ನನ್ನ ಮಾವ ಲಿಂಗರಾಜೇಗೌಡರವರ ತಂದೆ ರಾಜೇಗೌಡರ ಮತ್ತು ರಾಜೇಗೌಡರ

ತಂದೆಯವರ ಹೆಸರನ್ನು ನಮೂದಿಸಿಲ್ಲ ಎಂದರೆ ಸರಿ. ವಾದ ಪತ್ರದಲ್ಲಿ ಸದರಿಯವರ ಹೆಸರನ್ನು ನಮೂದಿಸಲು ನನಗೆ ತೊಂದರೆ ಇರಲಿಲ್ಲ. ದಾವಾ ಸ್ವತ್ತಿನ ಸಂಖ್ಯೆ 3 ಮತ್ತು 4 ರ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳಲ್ಲಿ ದಾವಾ ಸ್ವತ್ತಿನ ಸಂಖ್ಯೆ 3 ಮತ್ತು 4 ರ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎನ್ನುವ ಬಗ್ಗೆ ನಮೂದಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನನ್ನ ಮಾವ ಲಿಂಗರಾಜೇಗೌಡರಿಗೆ ಇಬ್ಬರು ಹೆಂಡತಿಯರು. ಅವರ ಹೆಸರು ನನಗೆ ನೆನಪಿಲ್ಲ. ಮೊದಲನೇ ಪ್ರತಿವಾದಿ ನನ್ನ ಗಂಡ ಅವರು ಮೊದಲನೇ ಹೆಂಡತಿಯ ಮಗ ಎಂದರೆ ಸರಿ. ಎರಡನೇ ಹೆಂಡತಿಯ ಹೆಸರು ಸುನಂದಮ್ಮ. ಅವರಿಗೆ ಒಬ್ಬನೇ ಮಗ. ಮೊದಲನೇ ಹೆಂಡತಿಗೆ 3 ಜನ ಮಕ್ಕಳಿದ್ದು ಅದರಲ್ಲಿ ಒಬ್ಬರು ಮೃತಪಟ್ಟಿರುತ್ತಾರೆ. ಸುಷ್ಮಾ ರವರು ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ. ಈ ದಾವೆಯಲ್ಲಿ ಸುಷ್ಮಾ ರವರು ಮತ್ತು ಮೃತಪಟ್ಟ ಶೋಭರವರ ವಾರಸುದಾರರನ್ನು ಪಕ್ಷಕಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ. ಸದರಿಯವರನ್ನು ಪಕ್ಷಕಾರರನ್ನಾಗಿ ಮಾಡಲು ತೊಂದರೆ ಇಲ್ಲ ಎಂದರೆ ಸುಷ್ಮಾ ರವರನ್ನು ಶಾರದಮ್ಮ ಕೋಂ ಚಿಕ್ಕಣೇಗೌಡರು ದತ್ತು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸುಷ್ಮಾರವರನ್ನು ದುತ್ತು ಪಡೆದುಕೊಂಡ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

(ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಾಮರಾಜನಗರ.